ಮೂಡುಶೆಡ್ಡೆ ಕ್ಷಯರೋಗ ಆಸ್ಪತ್ರೆಯಲ್ಲಿ ನಕ್ಷ-ಕಿರಣ ಯಂತ್ರ ದುರುಸ್ತಿ

349(713) ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಸುರತ್ಕಲ್ ಮೂಡುಶೆಡ್ಡೆ ಕ್ಷಯರೋಗ ಆಸ್ಪತ್ರೆಯ 'ಎಕ್ಸ್‌ರೇ' ಯಂತ್ರ ಕೆಟ್ಟು ಆಲ್ಲಿಯ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಲವಾರು ಬಾರಿ ಸದನದಲ್ಲಿ ಕ್ಷ-ಕಿರಣ ಯಂತ್ರವನ್ನು ಕೂಡಲೇ ದುರಸ್ತಿ ಮಾಡಿಸುವುದಾಗಿ ಭರವಸೆ ನೀಡಿರುವುದು ನಿಜವೇ?

ಇ) ಹಾಗಿದ್ದಲ್ಲಿ ಯಾವಾಗ ದುರಸ್ತಿ ಮಾಡಿಸಲಾಗುವುದು?

ಡಾ: ಹೆಚ್.ಸಿ. ಮಹದೇವಪ್ಪ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಅ) ಬಂದಿದೆ.

ಆ) ನಿಜ.

ಇ) ಈ ಕ್ಷ-ಕಿರಣ ಯಂತ್ರವು ಬಹಳ ಹಳೆಯದಾಗಿದ್ದು ದುರಸ್ತಿ ಮಾಡಲು ಸಾಧ್ಯವಾಗುತ್ತಿಲ್ಲ. ಅದರ ಬದಲಿಗೆ ಒಂದು ಹೊಸ ಕ್ಷ-ಕಿರಣ ಯಂತ್ರವನ್ನು ಖರೀದಿಸಿ ಸದರಿ ಆಸ್ಪತ್ರೆಗೆ ನೀಡುವ ಪ್ರಸ್ತಾವನೆ ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ.

ಹೈದರಾಬಾದ್ ವೇತನ ಶ್ರೇಣಿ

350 (747) ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರುತ್ಕಲ್) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಶಾಲೆಗಳಲ್ಲಿ ತರಬೇಕಾಗದ ನಾನ್ ಎಸ್.ಎಸ್.ಎಲ್.ಸಿ. ವೃತ್ತಿ ಶಿಕ್ಷಕರ ಸಂಖ್ಯೆ ಎಷ್ಟು ಕಳೆದ ಐದು ವರ್ಷಗಳಲ್ಲಿ ಎಷ್ಟು ಅಂಥ ಶಿಕ್ಷಕರು ನಿವೃತ್ತರಾಗಿರುತ್ತಾರೆ.

ಆ) ಅವರುಗಳಿಗೆ ಹೈದರಾಬಾದ್ ವೇತನ ಶ್ರೇಣಿಯನ್ನು ನೀಡಲಾಗಿದೆಯೇ; ಇಲ್ಲವಾದಲ್ಲಿ ಕಾರಣಗಳೇನು;

ಇ) ಕೇವಲ ಕೆಲವೇ ಶಿಕ್ಷಕರುಗಳು ಅಂಥವರಿರುವುದರಿಂದ ನಿವೃತ್ತ ಹಾಗೂ ಸೇವೆಯಲ್ಲಿರುವ ಶಿಕ್ಷಕರುಗಳಿಗೆ ಹೈದರಾಬಾದ್ ವೇತನ ಶ್ರೇಣಿಯನ್ನು ನೀಡಲು ಕ್ರಮ ಜರುಗಿಸುವರೆ?

ಈ) ಇತರ ತರಬೇತಾದ ನಾನ್ ಎಸ್‌ಎಸ್‌ಎಲ್‌ಸಿ ಶಿಕ್ಷಕರಿಗೆ ಹೈದರಾಬಾದ್ ವೇತನ ಶ್ರೇಣಿಯನ್ನು ನೀಡಿ ತರಬೇತು ಆಗಿಲ್ಲ ಎಂಬ ಕಾರಣಕ್ಕೆ ನಿರಾಕರಿಸುವುದು ನ್ಯಾಯ ಸಮ್ಮತವೇ?

ಶ್ರೀ ಹೆಚ್.ಜಿ.ಗೋವಿಂದಗೌಡ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು

ಅ) 292 174

ಆ) ರಾಜ್ಯ ಪುನರ್ವಿಂಗಡಣೆ ಪೂರ್ವದಲ್ಲಿ ಹೈದರಾಬಾದ್ ಪ್ರದೇಶದ ಹಾಗೂ ಇತರ ಪ್ರದೇಶಗಳ ಪ್ರಾಥಮಿಕ ಶಾಲಾ ಶಿಕ್ಷಕರ ವೇತನಗಳು ಬೇರೆ ಬೇರೆಯಾಗಿದ್ದವು.

ಇ) 1961ರ ವೇತನ ಪರಿಷ್ಕರಣೆಯಲ್ಲಿ ಇವರೆಲ್ಲರಿಗೂ ಒಂದೇ ವೇತನ ನೀಡಲಾಗಿ ವೇತನ ತಾರತಮ್ಯ ಉಂಟಾಯಿತು. ಇದನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ ರಾಜ್ಯ ಸರ್ಕಾರ ಹಾಗೂ ಅರ್ಜಿದಾರರ ರಾಜೀ ಸೂತ್ರದನ್ವಯ ಹೈದರಾಬಾದ್ ಪ್ರದೇಶದ ಶಿಕ್ಷಕರ ವೇತನನ ಸೌಲಭ್ಯವನ್ನು ಇತರ ಪ್ರದೇಶಗಳಲ್ಲಿನ ದಿನಾಂಕ 31-12-89ರ ಹಿಂದೆ ನೇಮಕವಾಗಿದ್ದ ಎಲ್ಲಾ ಅರ್ಹ ಶಿಕ್ಷಕರಿಗೂ ಮಂಜೂರು ಮಾಡಲಾಯಿತು.

ಈ) ಆದರೆ, ರಾಜ್ಯ ಪುನರ್ವಿಂಗಡಣೆ ಪೂರ್ವದಲ್ಲಿ ಈ ವಿವಿಧ ಪ್ರದೇಶಗಳಲ್ಲಿನ ನಾನ್ ಎಸ್.ಎಸ್.ಎಲ್.ಸಿ ತರಬೇಕಾಗದ ಶಿಕ್ಷಕರು: ವೃತ್ತಿ ಶಿಕ್ಷಕರ ವೇತನದಲ್ಲಿ ವ್ಯತ್ಯಾಸ ಇರಲಿಲ್ಲ. ಹಾಗಾಗಿ ಇಂತಹ ಶಿಕ್ಷಕರನ್ನು ಹೈದರಾಬಾದ್ ವೇತನ ಸೌಲಭ್ಯ ವಿಸ್ತರಣಾ ಆದೇಶದ ವ್ಯಾಪ್ತಿಗೆ ಒಳಪಡಿಸಿರುವುದಿಲ್ಲ. ಆದ್ದರಿಂದ ನಾನ್ ಎಸ್.ಎಸ್.ಎಲ್.ಸಿ ತರಬೇಕಾಗದ ವೃತ್ತಿ ಶಿಕ್ಷಕರು ಸದರಿ ವೇತನ ಸೌಲಭ್ಯಕ್ಕೆ ಅರ್ಹರಲ್ಲದಿರುವುದರಿಂದ ಅವರಿಗೆ ಈಗ ಹೈದರಾಬಾದ್ ವೇತನ ಮಂಜೂರು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಸುರತ್ಕಲ್ ಕ್ಷೇತ್ರದ ಮೂಡುಶೆಟ್ಟಿ ಕ್ಷಯರೋಗ ಆಸ್ಪತ್ರೆಯ ಕಟ್ಟಡದ ಸ್ವಾಧೀನ ಪಡೆಯುವುದು.

351(714) **ಶ್ರೀ ಕುಂಭ್ಳೆ ಸುಂದರರಾವ್(ಸುರತ್ಕಲ್)** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುರತ್ಕಲ್ ಮೂಡುಶೆಟ್ಟಿಯ ಕ್ಷಯರೋಗ ಆಸ್ಪತ್ರೆತೆಯ ಕಟ್ಟಡ ವಿಸ್ತರಣೆ ಕಾರ್ಯವನ್ನು ಎಂದು ಪೂರ್ತಿ ಮಾಡಲಾಯಿತು: ಇದಕ್ಕೆ ತಗಲಿದ ವೆಚ್ಚ ಎಷ್ಟು?

ಆ) ಈ ಆಸ್ಪತ್ರೆಯ ಕಟ್ಟಡವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳದಿರಲು ಕಾರಣವೇನು? ಯಾವಾಗ ಅದರ ಪ್ರಯೋಜನ ಜನರಿಗೆ ದೊರಕುವುದು?

ಡಾ: ಹೆಚ್.ಸಿ. ಮಹದೇವಪ್ಪ ಆರೋಗ್ಯ ಸಚಿವರು.

ಅ) 1994-95ನೇ ಸಾಲಿನಲ್ಲಿ ಕಟ್ಟಡ ಕಾಮಗಾರಿ ಪೂರ್ಣವಾಗಿದೆ. ಡಿಸೆಂಬರ್ 95ರವರೆಗೆ ರೂ.29.15 ಲಕ್ಷಗಳು ವೆಚ್ಚವಾಗಿರುತ್ತದೆ.

ಆ) ಕಟ್ಟಡ ಕಾಮಗಾರಿ ಪೂರ್ಣವಾಗಿದ್ದೂ ಇನ್ನೂ ಕೆಲವು ಅಗತ್ಯ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯವರು ಕೈಗೊಳ್ಳಬೇಕಿದ್ದು, ಅದರಿಂದಾಗಿ ಕಟ್ಟಡವನ್ನು ಸ್ವಾಧೀನಕ್ಕೆ